ಬ್ಲ್ಯಾಕ್ ಅಂಡ್ ವೈಟ್ ಪುಟ್ಟ ಟಿವಿಯೆಡೆ ಕೈಮಾಡಿ, ಅದರೊಳಗೆ ಡ್ಯಾನ್ಸ್ ಮಾಡುತ್ತಿದ್ದ ಹೀರೋ ಹೀರೋಯಿನ್‌ಗಳನ್ನು ನೋಡು ಎಂದು ಹುಬ್ಬು ಕುಣಿಸಿದಳು. ನನಗೋ ಕಾಲಿಗೂ, ಗಂಟಲಿಗೂ ಥಣ್ಣಗೆ ನೀರು ಸುರಿದುಕೊಂಡರೆ ಸಾಕೆನ್ನಿಸಿತ್ತು.

ಒಂದು ದಿವಾನಾ ಹಿಡಿದು ಓಡಾಡಲೊಂದಿಷ್ಟು ಜಾಗವಿರುವ ಹಾಲ್, ಇಬ್ಬರು ನಿಲ್ಲುವಷ್ಟು ಅಡುಗೆಮನೆ, ನಾಲ್ಕೈದು ಜನ ಮಲಗುವಷ್ಟು ಕೋಣೆ, ಅದಕ್ಕಂಟಿಕೊಂಡ ಬಚ್ಚಲು. ನಿಂತಲ್ಲಿ ನಿಂತು ಕಣ್ಣಾಡಿಸಿದರೆ ಎಲ್ಲೆಲ್ಲಿ ಏನೇನಿದೆಯೋ ಎಲ್ಲವೂ ಕಾಣುವಂಥ ಪುಟ್ಟ ಶೀಟಿನ ಮನೆಯದು. ಅಡುಗೆಮನೆಯ ಕಿಟಕಿಗೆ ಅರ್ಧವೃತ್ತಾಕಾರದ ತಂತಿಯೊಂದು ನೇತುಹಾಕಿ, ಅದರ ಬಾಯಿಗೆ ತೊಳೆದ ನಂದಿನಿ ಹಾಲಿನ ಕವರುಗಳನ್ನು ಚುಚ್ಚಿದ್ದರಿಂದ ಅದು ಬಿಳೀಕಮಲದ ಪಕಳೆಗಳಿಂದ ಮಾಡಿದ ಮಾಲೆಯಂತೆ ಕಾಣುತ್ತಿತ್ತು. ದೇವರ ಗೂಡಿನ ಪಕ್ಕದಲ್ಲಿದ್ದ ಶಾಬಾದಿಮಠ ಕ್ಯಾಲೆಂಡರಿನ ಭುಜಕ್ಕೆ ಕೈಹೊಲಿಗೆಗೆ, ದಾಟು ಹೊಲಿಗೆಗೆ, ಕೌದಿ ಹೊಲಿಗೆಗೆ ಎಂದು ಬೇರೆಬೇರೆ ಅಳತೆಯ ಸೂಜಿಗಳು ಚುಚ್ಚಿಕೊಂಡಿದ್ದವು ಮತ್ತು ಬಳಕೆಯ ಸಾಕ್ಷಿಗೆ ಅಲ್ಲಿ ಸಾಕಷ್ಟು ತೂತುಗಳಾಗಿದ್ದವು. ಗ್ಯಾಸೊಲೆಯ ಹಿಂದಿನ ಗೋಡೆಗೆ ಒಂದಡಿ ಎತ್ತರದಷ್ಟು ಯಾವುದೋ ಡಬ್ಬಿಯ ತಗಡನ್ನು ಆಯತಾಕಾರದಲ್ಲಿ ಕತ್ತರಿಸಿ ಆನಿಸಿಡಲಾಗಿತ್ತು, ಹಟಮಾರಿ ಒಗ್ಗರಣೆ ಅದನ್ನು ದಾಟಿಕೊಂಡು ಸಿಡಿದರೂ ಎಷ್ಟೋ ವರ್ಷಗಳಿಂದ ಬಿಮ್ಮನೆ ನಿಂತಂತ್ತಿತ್ತು. ಚೌಕನೆಯ ಮಾಡಿನಲ್ಲಿ ಜೋಡಿಸಿದ್ದ ಪಳಿಗಳ ಮೇಲೆ ವನಸ್ಪತಿ ಬ್ರ್ಯಾಂಡಿನ ಹಳದಿ ಡಾಲ್ಡಾ ಡಬ್ಬಿ, ಏಶಿಯನ್ ಪೇಂಟ್ ಡಬ್ಬಿ, ಸೊಂಡಿಲು ಬೆಸೆದುಕೊಂಡ ಆನೆಚಿತ್ರಗಳಿದ್ದ ಫೆವಿಕಾಲ್ ಡಬ್ಬಿಗಳಿದ್ದವು. ಅಲ್ಲೆಲ್ಲೂ ಪ್ರತ್ಯೇಕ ಮಸಾಲೆಡಬ್ಬಿ ಕಾಣದ್ದರಿಂದ ಕರ್ಪೂರ, ಇಂಗಿನ ಡಬ್ಬಿಗಳಲ್ಲಿದ್ದವುಗಳು ವಗ್ಗರಣೆಯ ಸಾಮಾನುಗಳಾಗಿದ್ದವೇನೋ. ಬಣ್ಣಬಣ್ಣದ ಪಾಂಪ್ಲೆಟ್‌ಗಳನ್ನು ಬಾರೀಕಾಗಿ ಹರಿದು ತೆಳುತಂತಿಗೆ ಚುಚ್ಚಿ ಗೋಡೆಗೆ ನೇತುಹಾಕಿಟ್ಟದ್ದು ದೀಪಕ್ಕೆ, ಸ್ಟೌಗೆ, ಚಿಮಣಿಗೆ ಆಗಿತ್ತು. ಗೂಡಿನೊಳಗಿನ ದೇವರುಗಳಲ್ಲಿ ಕೆಲವರು ಎದ್ದು ನಿಂತಿದ್ದರು ಮತ್ತೆ ಕುಳಿತಿದ್ದರು. ದೀಪಕ್ಕೆ ಎಣ್ಣೆ ತೀರುತ್ತ ಬಂದಿತ್ತು.

ಶಾಕಾಂಬರಿ ಕೈಜಗ್ಗಿ ಕೋಣೆಗೆ ಕರೆದೊಯ್ದಳು. ಬಾಗಿಲ ಹಿಂದೆ ಕೈತೋರಿ, 'ನೋಡಾ ಇಲ್ಲೇ ಈ ನಮ್ ದೇವರನ್ ನೋಡು' ಕಣ್ಣುಮಿಟುಕಿಸಿ ಹೃತಿಕ್‌ನ ಎದೆಗೆ ಗುದ್ದಿದಳು. 'ನೋಡವನ ಕಣ್, ಬಾ ಅಂತ ಕರದ್ದಂಗ ಇಲ್ಲಾ?' ಅಂದಳು. ಹಣೆಬಡಿದುಕೊಂಡು ದವಡೆ ಕಚ್ಚಿಕೊಂಡು ಹೊರಬಂದೆ. ಶಾಕಾಂಬರಿಯ ಅಮ್ಮ ಬಿಸಿಬಿಸಿ ಅನ್ನ, ಸಾರು, ಚಟ್ನೀಪುಡಿ, ನಿಂಬೆ ಉಪ್ಪಿನಕಾಯಿ ತಟ್ಟೆಗೆ ಬಡಿಸಿದರು. ಕಡಿಮೆ ಪದಾರ್ಥ ಬಳಸಿ ಮಾಡಿದ ಸಾರು ತನ್ನ ಕಂಪನ್ನುಳಿಸಿಕೊಂಡಿದ್ದು ನಾಲಗೆಗೆ ಇಡುತ್ತಿದ್ದಂತೆ ಗೊತ್ತಾಯಿತು. ಆದರೂ ರೇಷನ್ ಅಕ್ಕಿ ನೆನಪಾಗಿ ಅವಳ ಕಿವಿಯಲ್ಲಿ ಉಸುರಿದೆ, ಆಕೆ ಜೋರಾಗಿ ನಗುತ್ತ ಅವರಮ್ಮನಿಗೆ ಹೇಳಿದಳು. ಅಮ್ಮ ಮಗಳು ಇಬ್ಬರೂ ಶೆಲ್ಫ್ ಮೇಲಿನ ಪಾತ್ರೆಗಳು ಎದ್ದೆದ್ದು ಕುಣಿಯುವಂತೆ ನಕ್ಕರು. ಹೀಗೆ ನಗುವುದು ಇವಳಿಗೆ ಅಮ್ಮನಿಂದಾನೇ ಬಂದಿದ್ದು ಹಾಗಿದ್ದರೆ. ಆದರೆ ನಾನೇನಾದರೂ ಕೇಳಬಾರದ್ದನ್ನು ಕೇಳಿದೆನಾ? 'ಮಾರಾಯ್ತಿ ಸುಮ್ಮನೆ ಉಣ್ಣು. ಆ ಉಸಾಬರಿಯೆಲ್ಲ ನಿನಗ್ಯಾಕ?' ಅಂದರು ಅವರಮ್ಮ. 'ಇಲ್ಲ, ನನಗದು ಬೇಕೇಬೇಕು' ಅಂದೆ. 'ಈವತ್ತು ಮಾಡಿಲ್ಲ, ಮತ್ತೊಮ್ಮೆ ಬಂದಾಗ ಮಾಡಿಕೊಡ್ತೀನಿ' ಅಂದರು. ಶಾಕಾಂಬರಿ ಊಟ ಮುಗಿಸಿ ಉಪ್ಪಿನಕಾಯಿಯ ತಿರುಳನ್ನು ಹೆಬ್ಬೆರಳಿನಿಂದ ಗೀರುತ್ತಿದ್ದಾಗ ನಿಂಬೆಯ ನರಗಳು ಸ್ಪಷ್ಟವಾಗಿ ಕಾಣುತ್ತಿದ್ದವು. 'ನಿಮ್ಮ ಅಪ್ಪಾ ಅವ್ರ ಆಫೀಸ್?' ಅಂದೆ. ಅದಕ್ಕೂ ತಾಯಿಮಗಳಿಬ್ಬರೂ ಹೈಫೈ ಮಾಡಿ ಪಟಾಕಿ ಹಾರಿಸಿದರು. ಇವರು ಯಾಕೆ ಹೀಗೆ ಎಲ್ಲದಕ್ಕೂ ಅನವಶ್ಯಕವಾಗಿ ನಗುವುದೆಂದು ಕಸಿವಿಸಿ ಉಂಟಾಗುತ್ತಿತ್ತು. ಆದರೆ, ರುಚಿಯಾದ ಸಾರು, ಹೆಚ್ಚು ಯೋಚಿಸಬೇಡ ಎಂದು ಕೈಬಾಯಿಗೆ ನಿರ್ದೇಶನ ಕೊಡುತ್ತಿತ್ತು. ಅವರಮ್ಮ ಮಧ್ಯೆಮಧ್ಯೆ ನನ್ನ ಪೂರ್ವಾಪರಗಳನ್ನೆಲ್ಲ ಕೇಳಿದರು, ನಾನು ಬಡಬಡನೇ ಹೇಳುತ್ತ ಹೋದೆ.